**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಹೆಚ್.ಆರ್.ಎಂ.ಎಸ್. ಮತ್ತು ಖಜಾನೆ-2 ರಲ್ಲಿ ವೇತನ ಬಿಲ್ಲು ಹಾಗೂ ವೇತನಗಳಲ್ಲಿನ ಕಡಿತ/ವಸೂಲಾತಿಗಳಿಗೆ ಸಂಬಂಧಿಸಿದಂತೆ ಭೌತಿಕ /ಷೆಡ್ಯೂಲ್ ಗಳ ಬದಲು ಆನ್‌ಲೈನ್ ನಲ್ಲಿ ಅಂಗೀಕರಿಸುವ ಕುರಿತು.

**ಓದಲಾಗಿದೆ:-**

ಖಜಾನೆ ಆಯುಕ್ತರ ಪತ್ರ ಸಂಖ್ಯೆ: ಖ-2/ಪಿಎಂಯು/92/2015-16, ದಿ:22.12.2021.

**ಪ್ರಸ್ತಾವನೆ:-**

ಖಜಾನೆ-2 ಯಶಸ್ವಿಯಾಗಿ ಅನುಷ್ಠಾನಗೊಂಡಿರುವ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಇಲಾಖೆಗಳ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು ಎಲ್ಲಾ ವರ್ಗದ ಬಿಲ್ಲುಗಳನ್ನು ಖಜಾನೆಗಳಿಗೆ ಆನ್‌ಲೈನ್ ನಲ್ಲಿ ಸಲ್ಲಿಸುತ್ತಿದ್ದಾರೆ. ವೇತನ ಮತ್ತು ವೇತನ ಭತ್ಯೆಗಳಿಗೆ ಸಂಬಂಧಿಸಿದ ಬಿಲ್ಲುಗಳು ಹೆಚ್.ಆರ್.ಎಂ.ಎಸ್. ನಲ್ಲಿ ತಯಾರಿಸಲ್ಪಟ್ಟು ಡಿಡಿಓ ಕಛೇರಿಗಳಲ್ಲಿ ಖಜಾನೆ-2 ಹಾಗೂ ಹೆಚ್.ಆರ್.ಎಂ.ಎಸ್. ಅನುಕಲನದ ವ್ಯವಸ್ಥೆಯಲ್ಲಿ ಸ್ವೀಕೃತವಾಗುತ್ತಿವೆ. ಸದರಿ ಬಿಲ್ಲುಗಳನ್ನು ಡಿಡಿಓ ರವರ ಕಛೇರಿಯಲ್ಲಿ ಪರಿಶೀಲಿಸಿ ಆನ್‌ಲೈನ್ ಮೂಲಕ ಖಜಾನೆಗಳಿಗೆ ಸಲ್ಲಿಸಲ್ಪಡುತ್ತಿದ್ದು, ಈ ರೀತಿ ಸಲ್ಲಿಸಲಾಗುವ ಆನ್‌ಲೈನ್ ಬಿಲ್ಲುಗಳನ್ನು ಮತ್ತು ಕಡಿತ ಹಾಗೂ ವಸೂಲಾತಿಗಳ ಷೆಡ್ಯೂಲ್/ಚಲನ್‌ಗಳನ್ನು ಡಿಡಿಓ ರವರು ಮುದ್ರಿಸಿ ಭೌತಿಕವಾಗಿ ಸಹಿ ಮಾಡಿ ಖಜಾನೆಗಳಿಗೆ ಸಲ್ಲಿಸಲಾಗುತ್ತಿದೆ. Digitalization of Vouchers ಅಂಗವಾಗಿ, ಹೆಚ್.ಆರ್.ಎಂ.ಎಸ್. ಮತ್ತು ಖಜಾನೆ-2 ರ ವೇತನ ಬಿಲ್ಲು ಹಾಗೂ ವೇತನಗಳಲ್ಲಿನ ಕಡಿತ / ವಸೂಲಾತಿಗಳಿಗೆ ಸಂಬಂಧ ಭೌತಿಕ/ಷೆಡ್ಯೂಲ್ ಗಳ ಬದಲು ಆನ್‌ಲೈನ್‌ಗಳಲ್ಲಿ ಅಂಗೀಕರಿಸಲು ಉದ್ದೇಶಿಸಲಾಗಿದ್ದು, ಈ ಕುರಿತಂತೆ ಪೈಲಟ್ ಅನ್ನು ವೇತನ ಬಿಲ್ಲಿಗೆ ಸಂಬಂಧಿಸಿದಂತೆ ಪ್ರಾರಂಭಿಸಲು ಉದ್ದೇಶ ಹೊಂದಿರುವುದಾಗಿ ಖಜಾನೆ ಆಯುಕ್ತರು ಮೇಲೆ ಓದಲಾದ ಪತ್ರದಲ್ಲಿ ತಿಳಿಸುತ್ತಾ, ವೇತನ ಬಿಲ್ಲು ಹಾಗೂ ವೇತನಗಳಲ್ಲಿನ ಕಡಿತ / ವಸೂಲಾತಿಗಳಿಗೆ ಸಂಬಂಧ ಭೌತಿಕ/ಷೆಡ್ಯೂಲ್ ಗಳ ಬದಲಾಗಿ ಆನ್‌ಲೈನ್‌ಗಳಲ್ಲಿ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸುವಂತೆ ಎಲ್ಲಾ ಇಲಾಖೆಗಳಿಗೆ ಸೂಚನೆಗಳನ್ನು ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ:ಆಇ: 01 ಟಿಟಿಸಿ 2022,**

**ಬೆಂಗಳೂರು, ದಿನಾಂಕ:23.03.2022.**

ವೋಚರುಗಳ ಡಿಜಿಟಲೀಕರಣದ ಅಂಗವಾಗಿ, ಹೆಚ್.ಆರ್.ಎಂ.ಎಸ್. ಮತ್ತು ಖಜಾನೆ-2 ರಲ್ಲಿ ವೇತನ ಬಿಲ್ಲು ಹಾಗೂ ವೇತನಗಳಲ್ಲಿನ ಕಡಿತ, ವಸೂಲಾತಿಗಳ ಸಂಬಂಧ ಭೌತಿಕ ಷೆಡ್ಯೂಲ್ ಗಳ ಬದಲು ಆನ್‌ಲೈನ್ ನಲ್ಲಿ ಅಂಗೀಕರಿಸಲು ದಿನಾಂಕ: 01.04.2022 ರಿಂದ ಜಾರಿಗೆ ಬರುವಂತೆ ಹೆಚ್.ಆರ್.ಎಂ.ಎಸ್.

ಮತ್ತು ಖಜಾನೆ-2 ರಲ್ಲಿ ಸೃಜಿಸುವ ವೇತನ ಹಾಗೂ ವೇತನ ಭತ್ಯೆಗಳಿಗೆ ಸಂಬಂಧಿಸಿದ ಬಿಲ್ಲುಗಳನ್ನು ಡಿಡಿಓ ರವರು ಡಿಎಸ್‌ಸಿ ಗಳ ಮೂಲಕ ದೃಢೀಕರಿಸಿ ಖಜಾನೆಗಳಿಗೆ ಆನ್‌ಲೈನ್ ಮೂಲಕ ಸಲ್ಲಿಸಲು ಆದೇಶಿಸಲಾಗಿದೆ.

ಕ್ಲೈಮಿನ ಸಾಚಾತನವನ್ನು ಖಚಿತಪಡಿಸಿಕೊಳ್ಳುವುದು ಡಿಡಿಓ ರವರ ಹೊಣೆಗಾರಿಕೆಯಾಗಿರುತ್ತದೆ. ಪ್ರಾಧೀಕರಿಸಿದ ಅಧಿಕಾರಿಗಳಷ್ಟೇ ಬಿಲ್ಲನ್ನು ತಯಾರಿಸಿ, ಡಿ.ಎಸ್.ಸಿ. ಮೂಲಕ ದೃಢೀಕರಿಸಿ, ತಮ್ಮ ಲಾಗಿನ್ ಮೂಲಕ ಬಿಲ್ಲನ್ನು ಸಂಬಂಧಪಟ್ಟ ಖಜಾನೆಗೆ ಸಲ್ಲಿಸತಕ್ಕದ್ದು.

ಯಾವುದೇ ಕಡಿತ ಮತ್ತು ವಸೂಲಾತಿಗಳ ಷೆಡ್ಯೂಲ್/ಚಲನ್‌ಗಳನ್ನು ಡಿಡಿಓ ರವರು ಮುದ್ರಿಸಿ, ಭೌತಿಕವಾಗಿ ಸಹಿಮಾಡಿ ಖಜಾನೆಗಳಿಗೆ ಸಲ್ಲಿಸುವಂತಿಲ್ಲ.

ಖಜಾನಾಧಿಕಾರಿಗಳು ವೇತನ / ವೇತನೇತರ ಭತ್ಯೆಗಳಿಗೆ ಸಂಬಂಧಿಸಿದ ಬಿಲ್ಲುಗಳನ್ನು ಆನ್‌ಲೈನ್ ನಲ್ಲಿ ಅಂಗೀಕರಿಸಿದ ನಂತರ ಕಡಿತ / ವಸೂಲಾತಿಗಳ Soft ಪ್ರತಿಯ ಆಧಾರದ ಮೇಲೆ ಮೌಲ್ಯಾಂಕಗಳನ್ನು ಪರಿಶೀಲಿಸಿ, ಖಜಾನಾಧಿಕಾರಿಗಳು ಪ್ರತಿಯೊಂದು ಕಡಿತ / ವಸೂಲಾತಿಗಳನ್ನು Hyper Link ಮೂಲಕ ಪರಿಶೀಲಿಸಿದ ನಂತರ ಪಾವತಿ ಮಾಡುವ ಬಗ್ಗೆ ಕ್ರಮಕೈಗೊಳ್ಳುವುದು.

ಖಜಾನೆಗಳು ಬಾಹ್ಯ ಏಜೆನ್ಸಿಗಳಿಗೆ ಹಾಗೂ ಇಲಾಖೆಗಳಿಗೆ ಮುದ್ರಿತ ಷೆಡ್ಯೂಲ್ / ಚಲನ್‌ಗಳ ಬದಲಾಗಿ ಇ-ಷೆಡ್ಯೂಲ್ / ಚಲನ್‌ಗಳನ್ನು ಸುರಕ್ಷಿತ ಮಾರ್ಗದಲ್ಲಿ ಕಳುಹಿಸುವುದು. ಮಹಾಲೇಖಪಾಲರಿಗೆ ಬಿಲ್ಲಿನ ಇ-ಪ್ರತಿಯನ್ನು ಯಥಾವತ್ತಾಗಿ Compilation form-1 ರಲ್ಲಿ ವೋಚರ್‌ವಾರು ಕಡಿತಗಳ ವಿವರಗಳೊಂದಿಗೆ ಕಳುಹಿಸುವುದು.

ಆದ್ದರಿಂದ, ಎಲ್ಲಾ ಆಡಳಿತ ಇಲಾಖೆಗಳು ತಮ್ಮ ಅಧೀನದ ಇಲಾಖೆಗಳಿಗೆ ದಿನಾಂಕ: 01.04.2022 ರಿಂದ ವೇತನ ಬಿಲ್ಲುಗಳನ್ನು ಆನ್‌ಲೈನ್ ನಲ್ಲಿ ಖಜಾನೆಗೆ ಸಲ್ಲಿಸಲು ಸೂಕ್ತ ಸೂಚನೆ ನೀಡುವುದು.

ಈ ಸಂಬಂಧ ಕರ್ನಾಟಕ ಆರ್ಥಿಕ ಸಂಹಿತೆ ಮತ್ತು ಕರ್ನಾಟಕ ಖಜಾನೆ ಸಂಹಿತೆ ನಿಯಮಗಳಿಗೆ ಸೂಕ್ತ ತಿದ್ದುಪಡಿ ತರಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

23/3/2022

**(ಹೆಚ್.ಎ. ಶೋಭ)**
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ).

**ಪ್ರತಿಗಳು:-**

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.

2. ಪ್ರಧಾನ ಮಹಾಲೇಖಪಾಲರು(ಸಾ.ಭ.ನಿ. ಶಾಖೆ), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು(ಲೆಕ್ಕಪತ್ರ ಶಾಖೆ), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
6. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್. ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ,ಅರಮನೆ ರಸ್ತೆ, ಬೆಂಗಳೂರು-560 001.
7. ಯೋಜನಾ ನಿರ್ದೇಶಕರು, HRMS-2.0, 5ನೇ ಮಹಡಿ ಕೆ.ಪಿ.ಸಿ.ಎಲ್. ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ,ಅರಮನೆ ರಸ್ತೆ, ಬೆಂಗಳೂರು-560 001.
8. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
9. ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ(ವೃತ್ತಿ ತೆರಿಗೆ), ವಾಣಿಜ್ಯ ತೆರಿಗೆ ಕಾರ್ಯಾಲಯ, ಮೊದಲನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು-560 009.
10. ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, 17 ನೇ ಮಹಡಿ, ವಿವಿ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು560 001.
11. ನಿರ್ದೇಶಕರು, ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು560 001.
12. ವ್ಯವಸ್ಥಾಪಕರು, ಭಾರತೀಯ ಜೀವಾವಿಮೆ ನಿಗಮ, ಕಸ್ತೂರಿ ಬಾ ರಸ್ತೆ, ಬೆಂಗಳೂರು.
13. ಜಂಟಿ ನಿರ್ದೇಶಕರು, ಎನ್.ಪಿ.ಎಸ್., 5ನೇ ಮಹಡಿ ಕೆ.ಪಿ.ಸಿ.ಎಲ್. ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-560 001.
14. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.